Dr. Shivakumar's
AKKA IAS ACADEMY

ಪಿಎಂ ಇಂಟರ್ನ್‌ಶಿಪ್ ಯೋಜನೆ

Posted at: 08/10/2024

ಪಿಎಂ ಇಂಟರ್ನ್‌ಶಿಪ್ ಯೋಜನೆ

ವಿವಿಧ ವೃತ್ತಿಗಳಿಗೆ ಸಂಬಂಧಿಸಿದಂತೆ ಯುವಜನರಿಗೆ ತರಬೇತಿ ಅವಕಾಶ ಒದಗಿಸುವ ಬಗ್ಗೆ ಪ್ರಸಕ್ತ ಸಾಲಿನ ಬಜೆಟ್ನಲ್ಲಿ ಪ್ರಕಟಿಸಿದ್ದ ‘ಪಿಎಂ ಇಂಟರ್ನ್‌ಶಿಪ್ ಯೋಜನೆ’ಗೆ ಡಿಸೆಂಬರ್ 2ರಿಂದ ಚಾಲನೆ ನೀಡಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ .

ಪಿಎಂ ಇಂಟರ್ನ್‌ಶಿಪ್ ಯೋಜನೆಯ ಬಗ್ಗೆ ತಿಳಿಯಿರಿ :

- ಪದವೀಧರರಾಗಿರುವ ಯುವಕರಲ್ಲಿ ಉದ್ಯೋಗಕ್ಕೆ ಬೇಕಾದ ಕೌಶಲ್ಯತೆ ಬೆಳೆಸಿ ಆ ಮೂಲಕ ಅವರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲು ಈ ಯೋಜನೆಯ ಇಂಟರ್ನ್‌ಶಿಪ್ ಸಹಕಾರಿ.
- ಇಂಟರ್ನ್‌ಶಿಪ್ ಮೂಲಕ ಸುಲಭವಾಗಿ ವಿದ್ಯಾರ್ಥಿಗಳು ಕಂಪನಿಗಳಲ್ಲಿನ ಮ್ಯಾನೇಜ್ಮೆಂಟ್ , ಕೆಲಸ ವ್ಯವಸ್ಥೆ ಹಾಗೂ ಮುಖ್ಯವಾಗಿ ಕೆಲಸಗಳಲ್ಲಿನ ಕೌಶಲ್ಯವನ್ನು ಕಲಿಯಬಹುದು
- ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಿಂದ ಅಭಿವೃದ್ಧಿಪಡಿಸಿರುವ ಪೋರ್ಟಲ್ ಮೂಲಕ ಯೋಜನೆಯು ಅನುಷ್ಠಾನಗೊಳ್ಳಲಿದೆ .
- ಮುಂದಿನ ಐದು ವರ್ಷದ ಅವಧಿಯಲ್ಲಿ ದೇಶದ ಒಂದು ಕೋಟಿ ಯುವಜನರಿಗೆ ಪ್ರಮುಖ 500 ಕಂಪನಿಗಳಲ್ಲಿ ಉದ್ಯೋಗದ ಬಗ್ಗೆ ತರಬೇತಿ ನೀಡುವುದು ಯೋಜನೆಯಡಿ ಗುರಿ ಹೊಂದಲಾಗಿದೆ. ‘2024-25ನೇ ಆರ್ಥಿಕ ವರ್ಷದಲ್ಲಿ ಸರ್ಕಾರವು ಪ್ರಾಯೋಗಿಕವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ.
- ಸರ್ಕಾರದ ಜೊತೆಗಿನ ಪಾಲುದಾರ ಕಂಪನಿಗಳು ತರಬೇತಿ ನೀಡುತ್ತವೆ. ಸ್ವಯಂಪ್ರೇರಿತವಾಗಿ ಯೋಜನೆಯಡಿ ಪಾಲ್ಗೊಳ್ಳುವ ಕಂಪನಿಗಳು 12 ತಿಂಗಳು ತರಬೇತಿ ನೀಡಬೇಕಿದೆ. ಸಚಿವಾಲಯದ ಒಪ್ಪಿಗೆ ಮೇರೆಗೆ ಇತರೆ ಕಂಪನಿ, ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳು ಕೂಡ ಯೋಜನೆಯಡಿ ಭಾಗವಹಿಸಲು ಅವಕಾಶವಿದೆ.
- 21 ವರ್ಷದಿಂದ 24 ವರ್ಷದ ಒಳಗಿನ ಯುವಜನರು ಅರ್ಹರಾಗಿದ್ದಾರೆ. ಆನ್ಲೈನ್ ಅಥವಾ ದೂರಶಿಕ್ಷಣದ ಮೂಲಕ ಶಿಕ್ಷಣ ಪಡೆದವರು ಕೂಡ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿದ್ದಾರೆ .
- ಅರ್ಹತೆ : ಎಸ್ಎಸ್ಎಲ್ಸಿ ಪಿಯುಸಿ ಉತ್ತೀರ್ಣರಾದವರು ಅರ್ಜಿ ಸಲ್ಲಿಸಬಹುದು. ಐಟಿಐ ಡಿಪ್ಲೊಮಾ ಕೋರ್ಸ್ ಓದಿದವರು ಅರ್ಹರಾಗಿದ್ದಾರೆ .
- ಆಯ್ಕೆಯಾದ ಅಭ್ಯರ್ಥಿಗೆ ಮಾಸಿಕ ₹ 5 ಸಾವಿರ ಭತ್ಯೆ ಸಿಗಲಿದೆ . ಸರ್ಕಾರವು ₹ 4500 ಭರಿಸಿದರೆ ಕಂಪನಿಯು ಸಿಎಸ್ಆರ್ ನಿಧಿಯಡಿ ₹ 500 ಇಂಟರ್ನ್‌ಶಿಪ್ ಭತ್ಯೆ ಪಾವತಿಸಲಿದೆ . ಇದರೊಟ್ಟಿಗೆ ಸಚಿವಾಲಯದಿಂದ ಒಂದು ಬಾರಿ ಪ್ರತಿ ಅಭ್ಯರ್ಥಿಗೆ ₹ 6000 ಧನಸಹಾಯ ನೀಡಲಾಗುತ್ತದೆ. ಕಂಪನಿಗಳು ಸಿಎಸ್ಆರ್ ನಿಧಿಯಿಂದ ತರಬೇತಿ ವೆಚ್ಚವನ್ನು ಭರಿಸಲಿದೆ .
- ವಿಮಾ ಸೌಲಭ್ಯ : ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಪಿಎಂ ಜೀವನ್ ಜ್ಯೋತಿ ಬಿಮಾ ಯೋಜನೆ ಮತ್ತು ಪಿಎಂ ಸುರಕ್ಷಾ ಬಿಮಾ ಯೋಜನೆಯಡಿ ವಿಮಾ ಸೌಲಭ್ಯ ಕಲ್ಪಿಸಲಾಗುತ್ತದೆ. ಸರ್ಕಾರವೇ ಈ ವಿಮಾ ಪ್ರೀಮಿಯಂ ಮೊತ್ತವನ್ನು ಪಾವತಿಸಲಿದೆ .